ಓ ಎಸ್ ನಂ.19/2024

ಡಿ.ಡಬ್ಲ್ಯೂ-1 ಗಫೂರ ತಂದೆ ರಾಜಅಹಮದ ಪಟೇಲ

(ಇಂದು ದಿನಾಂಕಃ **05-01-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಜಿ ಹೆಚ್ ವಕೀಲರಿಂದ.

ರಾಜಅಹಮದರವರ ತಂದೆಯ ಹೆಸರು ದಸ್ತಗೀರ ಪಟೇಲ್ ಆಗಿರುತ್ತದೆ. ನಾನು ರಾಜಅಹಮದರವರ ಮಗನಾಗಿರುತ್ತೇನೆ. ಜಾಫರಸಾಬರವರಿಗೆ ೮ ಎಕರೆ ಜಮೀನು ಮತ್ತು ನಮಗೆ ೮ ಎಕರೆ ಜಮೀನು ಪಾಲಿಗೆ ಬಂದಿದ್ದವು. ಜಾಫರಸಾಬರವರು ತಮ್ಮ ಜಮೀನನ್ನು ಶಾಂತಪ್ಪ ಪಾಟೀಲರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಶಾಂತಪ್ಪರವರು ಕಸ್ತೂರಿಬಾಯಿ ಮತ್ತು ಯಶೋದಾಬಾಯಿರವರಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಬುರನಪಟೇಲ ನಮ್ಮ ಅಜ್ಜನೆ ಆಗಬೇಕು. ನಮ್ಮ ತಂದೆ ಕೂಡಾ ಶಾಂತಪ್ಪರವರಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಜಮೀನು ಮಾರಾಟ ಮಾಡಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ೧೯೭೪ ರಲ್ಲಿ ಜಾಫರಸಾಬರವರು ೮ ಎಕರೆ ೨೫ ಗುಂಟೆ ಜಮೀನನ್ನು ಶಾಂತಪ್ಪರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

೨. ಬುರನ ತಂದೆ ಲಾಡ್ಲೆ ಪಟೇಲರವರು ಮೈಲಾರಪ್ಪ ತಂದೆ ಭೀಮಣ್ಣ ಪೂಲಾರಿರವರಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ಮತ್ತು ನಮ್ಮ ಕಾಕಾರವರು ಜಮೀನು ಮಾರಾಟ ಮಾಡಿ, ನಮಗೆ ಕೇವಲ ೧ ಎಕರೆ ಜಮೀನು ಮಾತ್ರ ಉಳಿದಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ನಮ್ಮ ತಂದೆ ಜಮೀನೇ ಮಾರಾಟ ಮಾಡಿರುವುದಿಲ್ಲ ಎನ್ನುತ್ತಾರೆ. ನಮ್ಮ ತಂದೆಗೆ ಸರ್ವೆ ನಂಬರ ೧ ರಲ್ಲಿ ೭ ಎಕರೆ ಮೇಲೆ

ಗುಂಟೆ ಜಮೀನು ಪಾಲಿಗೆ ಬಂದಿರುತ್ತದೆ. ಸಾಕ್ಷಿಯು ಎಷ್ಟು ಗುಂಟೆ ಎಂದು ನನಗೆ ನಿಖರವಾಗಿ ಈಗ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ನಮ್ಮ ತಂದೆಗೆ ಸರ್ವೆ ನಂಬರ ೧ ರಲ್ಲೇ ಜಮೀನು ಪಾಲಿಗೆ ಬಂದಿದೆ, ಅದರಲ್ಲಿ ಹಿಸ್ಸೆ ಇರುವುದಿಲ್ಲ. ನಾನು ೪ನೇ ತರಗತಿಯವರೆಗೆ ಶಾಲೆ ಓದಿರುತ್ತೇನೆ. ಬುರನರವರು ಮಲಕಪ್ಪರವರಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದು ನಮ್ಮ ಹಿರಿಯರಿಗೆ ಗೊತ್ತು, ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂಬರ ೧/೨ಅ ರ ೪ ಎಕರೆ ಶಿವರಾಯ ತಂದೆ ಶರಣಪ್ಪ ಪಾಟೀಲ್ ರವರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.